ಅಸಲು ದಾವೆ ಸಂಖ್ಯೆ - 165/2019
ಡಿ.ಡಬ್ಲ್ಯೂ - 01
ದಿನಾಂಕಃ 11-12-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಸಿ ಎಸ್ ಎಮ್ ವಕೀಲರಿಂದ**

ಈ ದಾವೆಗೆ ತಕರಾರು ಯಾರು ಹಾಕಿದ್ದಾರೆ ಎಂದು ಹೇಳಲು ಆಗುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ವಾದಿಯ ಪರಿಚಯ ನನಗೆ ಇದೆ. ವಾದಿಯು ನಿಮ್ಮ ಮೇಲೆ ಯಾವ ಕಾರಣಕ್ಕಾಗಿ ದಾವೆ ಹೂಡಿದ್ದಾರೆ ಎಂದರೆ ಹೊಲ ಒತ್ತುವರಿಯಾಗಿದೆ ಎಂದು ದಾವೆ ಹೂಡಿದ್ದಾರೆ. ಈ ದಾವೆಯಲ್ಲಿ ಪ್ರತಿವಾದಿಯರು 10 ಗುಂಟೆ 2 ಆಣೆ ಜಮೀನನ್ನು ಒತ್ತುವರಿ ಮಾಡಿದ್ದಾರೆ ಎಂದು ನಿಮ್ಮ ವಿರುದ್ಧ ದಾವೆ ಹೂಡಿದ್ದಾರೆ ಎಂದರೆ ಸರಿ. ದಿಃ 24-04-2018 ರಂದು ಸರ್ವೆ ಅಧಿಕಾರಿಗಳು ದಾವಾ ಆಸ್ತಿಗೆ ಬಂದು ವಾದಿಯ ಆಸ್ತಿ ಒತ್ತುವರಿಯಾಗಿದೆ ಎಂದು ವರದಿ ಹಾಕಿರುತ್ತಾರೆ ಎಂದರೆ ಯಾವುದೇ ಅಧಿಕಾರಿಗಳು ಅಳತೆ ಮಾಡಲು ಬಂದಿರುವುದಿಲ್ಲ. ಪ್ರತಿವಾದಿಯರು ಒತ್ತುವರಿ ಮಾಡಿದ ಜಮೀನನ್ನು ಬಿಟ್ಟು ಕೊಡದೆ ಇದ್ದುದ್ದರಿಂದ ವಾದಿಯು ಈ ದಾವೆಯನ್ನು ಮಾಡಿದ್ದಾರೆ ಎಂದರೆ ಸರಿಯಲ್ಲ.

ಈ ಹಿಂದೆ ನೀವು ಸಲ್ಲಿಸಿದ ದಾಖಲಾತಿಗಳು ಯಾವುದೂ ಎಂದರೆ ಉತಾರಗಳು ಮತ್ತು ನಕ್ಷೆ ಇರುತ್ತದೆ. ಸಾಕ್ಷಿಗೆ ನಿಡಿ- 1 ಮತ್ತು 2 ನ್ನು ತೋರಿಸಿದ್ದು ಅದನ್ನು ಯಾವ ದಿನಾಂಕದಂದು ತಯಾರಿಸಿದ್ದು ಎಂದರೆ ದಿನಾಂಕ ಅದರಲ್ಲಿ ಕಾಣಿಸಿರುವುದಿಲ್ಲ. ನೀವು ಹಾಜರುಪಡಿಸಿದ ದಾಖಲಾತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ನಿಮಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.